# ಬುತ್ತಿ ಚಿಗುರು

## ಸಾಧನೆ!

‘ರೀ, ಕಂಡ್ಹಿಡದ್ಬಿಟ್ಟೆ ಕಣ್ರೀ!’ ಪದ್ದುವಿನ ಉತ್ಸಾಹ.

‘ಏನೇ ಅದು ಕಂಡ್ಹಿಡದದ್ದು?’ ಮಲ್ಲೇಶಿಯ ಪ್ರಶ್ನೆ.

‘ಇರುವೆ, ಗೊದ್ದದ ಕಾಟ ತಡೆಯಲಾರದೇ ಸಕ್ಕರೆ ಡಬ್ಬಕ್ಕೆ ಖಾರದ ಪುಡಿ ಅಂತ ಲೇಬಲ್ ಅಂಟಿಸಿದ್ದೆ. ಆದ್ರೂನೂ ಇರುವೆಗಳು ಡಬ್ಬದಲ್ಲಿ ತುಂಬಿಕೊಂಡಿದ್ವು ಕಣ್ರೀ!’

‘ಈಗೇನಾಯ್ತು? ಅಷ್ಟಕ್ಕೂ ನೀನೇನ್ ಕಂಡ್ಹಿಡದ್ಯೇ?’ ಮಲ್ಲೇಶಿ ಸಿಡುಕಿದ.

‘ರೀ! ಇಲ್ಕೇಳಿ, ಇರುವೆಗೆ ಓದೋಕೆ ಬರೋಲ್ಲ ಅನ್ನೋದನ್ನ ಕಂಡ್ಹಿಡದ್ಬಿಟ್ಟೆ ಕಣ್ರೀ!’ ಪದ್ದುವಿನ ಸಂಭ್ರಮ ಹೇಳತೀರದಾಗಿತ್ತು.

**ಲತಾ ಹೆಗಡೆ**



## ಸೈಡ್ ಎಫೆಕ್ಟ್!

ನಾಣಿ ಒಬ್ಬ ಜ್ಯೋತಿಷಿ ಬಳಿ ಹೋಗಿ ‘ಸ್ವಾಮಿ ನಮ್ಮ ಮನೆಯ ಮುಂದಿನ ಮನೆ ಹುಡುಗಿಯನ್ನು ಇಷ್ಟಪಟ್ಟಿದ್ದೇನೆ. ಅದು ನೆರವೇರುವಂತೆ ಏನಾದರೂ ಮಾಡಿ’ ಎಂದ. ಅವರು ಒಂದು ತಾಯಿತವನ್ನು ಅವನ ತೋಳಿಗೆ ಕಟ್ಟಿ ‘ಇದು ಎಫೆಕ್ಟ್ ಬೀರುವ ತಾಯಿತ’ ಎಂದು ಹೇಳಿ ಕಳಿಸಿದರು.

ಒಂದು ತಿಂಗಳಲ್ಲಿಯೇ ನಾಣಿ ಮತ್ತೆ ಜ್ಯೋತಿಷಿ ಹತ್ತಿರ ಬಂದು. ‘ಸ್ವಾಮಿ ನಿಮ್ಮ ತಾಯಿತ ನಾನು ಇಷ್ಟಪಟ್ಟಿದ್ದ ಹುಡುಗಿಗೆ ಎಫೆಕ್ಟ್ ಬೀರಲಿಲ್ಲ. ಆದರೆ ನಮ್ಮ ಮನೆಯ ಪಕ್ಕದ ಹುಡುಗಿಗೆ ಎಫೆಕ್ಟ್ ಬೀರಿ ಆಕೆ ನನ್ನನ್ನು ಇಷ್ಟಪಡುತ್ತಿದ್ದಾಳೆ’ ಎಂದ. ತಕ್ಷಣ ಜ್ಯೋತಿಷಿ ‘ನಾನು ಹೇಳಿರಲಿಲ್ಲವೇ, ಈ ತಾಯಿತ ಏನಾದರೂ ಎಫೆಕ್ಟ್ ಮಾಡಿಯೇ ಮಾಡುತ್ತದೆ ಎಂದು. ಈಗ ಈ ತಾಯಿತದ ಪ್ರಭಾವ ಸೈಡ್ ಎಫೆಕ್ಟ್ ಆಗಿದೆ ಅಷ್ಟೇ’ ಎಂದಾಗ ನಾಣಿಗೆ ಮುಂದೆ ಏನು ಮಾತಾಡಲು ತೋಚಲಿಲ್ಲ!

**ಶಂಕರೇಗೌಡ ತುಂಬಕೆರೆ**

